ಎಂ.ವಿ.ಸಿ. ನಂಬ್ರ:985 /15 ಪಿ.ಡಬ್ಲ್ಯೂ:2

ದಿಃ 28-12-2017 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: 2ನೇ ಎದುರುದಾರರ ಪರವಾಗಿ ಶ್ರೀ ಎನ್ ವಿಆರ್ ವಕೀಲರಿಂದ

ದಿಃ 03-09-2015 ರಂದು ಪ್ರಥಮ ಬಾರಿಗೆ ನಾನು ಅರ್ಜಿದಾರನ ಜೊತೆ ಇದ್ದೆ ಆ ಬಗ್ಗೆ ನಾನೇ ದೂರನ್ನು ಕೊಟ್ಟಿದ್ದೇನೆಂದರೆ ನಿಜ. ದಿಃ02-09-2015 ರಂದು ರಾತ್ರಿ 8.15 ಗಂಟೆಗೆ ನಾನು ಕುಂದಾಪುರದಲ್ಲಿದ್ದೆ ಎಂದರೆ ಸರಿ ಅಲ್ಲಾ. ದಿಃ02-09-2015 ರ ಸಂಜೆ ನಾನು ಅರ್ಜಿದಾರನೊಂದಿಗೆ ಇದ್ದೆ ಎಂದರೆ ನಿಜ. ಆ ದಿನ ನಾನು ಯಾರ ಜೊತೆನೂ ಬಾರ್ ಆ್ಯಂಡ್ ರೆಸ್ಟೋರೆಂಟಿಗೆ ಹೋಗಿರುವುದಿಲ್ಲ. ನನ್ನ ಜೊತೆ ಇದ್ದವರು ಆ ದಿನ ಯಾರೂ ಮದ್ಯಸೇವನೆ ಮಾಡಿರುವುದಿಲ್ಲ. ವೈದ್ಯಕೀಯ ದಾಖಲೆ ಪ್ರಕಾರ 02-09-2015 ರಂದು ರಾತ್ರಿ 8.15 ಗಂಟೆಗೆ ಅರ್ಜಿದಾರನು ಮದ್ಯಪಾನ ಮಾಡಿ ಬೈಕು ಬಿಡುತ್ತಾ ಬೈಕು ಸ್ಕಿಡ್ಡಾಗಿ ಬಿದ್ದು ಕುಂದಾಪುರದಲ್ಲಿ ದಾಖಲಾಗಿದ್ದ ಎಂದರೆ ಸರಿ ಅಲ್ಲಾ. ಆ ದಿನ ಅರ್ಜಿದಾರನು ಒಬ್ಬನೇ ಮದ್ಯಪಾನ ಮಾಡಿ ಬೈಕು ಬಿಡುತ್ತಾ ಅವರೊಬ್ಬರೇ ಬಿದ್ದಿದ್ದಾರೆಂದರೆ ಸಾಕ್ಷಿಯು ನಾನು ಸಹ ಅವರ ಹಿಂಬದಿ ಸವಾರನಾಗಿ ಇದ್ದೆ ಎಂದು ಆ ರೀತಿ ಮದ್ಯ ಸೇವನೆ ಮಾಡಿ ಬಿದ್ದಿರುವುದಿಲ್ಲ ಎಂದು ತಿಳಿಸಿರುತ್ತಾರೆ. ಪೋಲೀಸರು ಯಾವ್ಯಾವ ದಾಖಲಾತಿಗಳನ್ನು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ತಯಾರಿಸಿದ್ದಾರೆಂದು ನನಗೆ ಗೊತ್ತಿಲ್ಲ. ಅರ್ಜಿದಾರನು ನನಗೆ ಶಾಲೆಗೆ ಹೋಗುವ ದಿನಾಂಕದಿಂದಲೂ ಪರಿಚಯ. ಅವರ ವಿನಂತಿ ಮೇರೆಗೆ ನಾನು ಪಿರ್ಯಾದಿ ಕೊಟ್ಟು ಆ ಬಗ್ಗೆ ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿ ಅಲ್ಲಾ. ಈ ದಿನ ಸಾಕ್ಷಿ ನ್ಯಾಯಾಲಯದ ಮುಂದೆ ನುಡಿಯಲು ನನಗೆ ಸಮನ್ಸು ಬಂದಿರುತ್ತದೆ. ಮುಖ್ಯ ವಿಚಾರಣೆಯಲ್ಲಿ ನಾನು ತಿಳಿಸಿರುವ ವಿಚಾರವನ್ನು ಆ ದಿನ ಅಪಘಾತ ಆಗಿದೆ ಎಂದು ನಾನು ಈ ದಿನ ನ್ಯಾಯಾಲಯದ ಮುಂದೆ ಹೇಳುತ್ತಿದ್ದೇನೆಂದರೆ ಸರಿ. 02-09-2015 ರಂದು ಆ ದಿನ ನಾನು ಫ್ರಾಸಾ.1 ರ ಜೊತೆ ಆ ಬೈಕಿನಲ್ಲಿದ್ದ ಬಗ್ಗೆ ಪ್ರತ್ಯೇಕ ದಾಖಲಾತಿ ಇರುವುದಿಲ್ಲ ಆದರೆ ನನಗೆ ಪೆಟ್ಟಾಗಿರುತ್ತದೆ. ನನಗೆ ಪೆಟ್ಟಾದ ಬಗ್ಗೆ ಪ್ರತ್ಯೇಕ ವೈದ್ಯಕೀಯ ದಾಖಲಾತಿ ನಾನು ಆ ಬಗ್ಗೆ ಮಾಡಿಸಿರುವುದಿಲ್ಲ. ಆ ಬಗ್ಗೆ ಫ್ರಾಸಾ.1 ರವರನ್ನು ನಾನು ಆಸ್ಪತ್ರೆಗೆ ಸೇರಿಸಿರುವುದಿಲ್ಲ ಆದರೆ ಅವರ ಮನೆಯವರು ಬಂದು ಸೇರಿಸಿರುತ್ತಾರೆ. ನಾನು ಆ ದಿನ ಸ್ಥಳದಲ್ಲಿ ಇರಲಿಲ್ಲ ಅಪಘಾತವಾದ ವಿಚಾರ ಫ್ರಾಸಾ.1 ರವರ ಮನೆಯವರಿಗೆ ಗೊತ್ತಾದ ನಂತರ ಆಮೇಲೆ ಅವರು ಬಂದು ಫ್ರಾಸಾ.1 ರವರನ್ನು ಆಸ್ಪತ್ರೆಗೆ ಆ ಬಗ್ಗೆ ಸೇರಿಸಿದ್ದಾರೆಂದರೆ ಸರಿ ಅಲ್ಲಾ, 02-09-2015 ರಂದು ನಾನು ಪೋಲೀಸರಿಗೆ ದೂರು ಕೊಡಲು ನನಗೆ ತೊಂದರೆ

ಇತ್ತು ಯಾಕೆಂದರೆ ನನ್ನ ಕಾಲಿಗೆ ಮತ್ತು ಕೈಗೆ ಪೆಟ್ಟಾಗಿತ್ತು ಮತ್ತು ನನ್ನ ಮನೆಯವರಿಗೆ ಅಪಘಾತದ ಬಗ್ಗೆ ಗೊತ್ತಾದಾಗ ತಡವಾಗಿತ್ತು. ಅಪಘಾತವಾದ ಸಮಯದಲ್ಲಿ ನಾನು ಪ್ರಾಯಸ್ಥನಾಗಿರುತ್ತೇನೆ. ನನಗೆ ಯಾವುದೇ ಪೆಟ್ಟಾಗಿರಲಿಲ್ಲ ಮತ್ತು ನಾನು ಸ್ಥಳದಲ್ಲಿ ಇರಲಿಲ್ಲ ಆದ ಕಾರಣ ದಿಃ02-09-2015 ರಂದು ನಾನು ಆ ಬಾಬ್ತು ಪೋಲೀಸರಿಗೆ ದೂರನ್ನು ಕೊಟ್ಟಿಲ್ಲ ಎಂದರೆ ಸರಿ ಅಲ್ಲಾ. ನಾನು ಪೋಲೀಸರಿಗೆ ಎರಡು ದಸ್ಕತ್ತು ಕೊಟ್ಟಿರುತ್ತೇನೆ. ಅಪಘಾತವಾದ ಜಾಗದ ಸ್ತಳವನ್ನು ನಾನು ತೋರಿಸಿಕೊಟ್ಟಿರುತ್ತೇನೆ. ನಾನು ತೋರಿಸಿಕೊಟ್ಟ ಜಾಗದಲ್ಲಿ ಯಾವುದೇ ಅಪಘಾತ ಆಗಿಲ್ಲ ಆದ ಕಾರಣ ನಾನು ಕುರುಹನ್ನು ಪೋಲೀಸರಿಗೆ ತೋರಿಸಿಕೊಟ್ಟಿಲ್ಲ ಎಂದರೆ ಸರಿ ಅಲ್ಲಾ. ಪೋಲೀಸರು ಸ್ತಳ ಪಂಚನಾಮೆ ಮಾಡಿದ ಬಗ್ಗೆ ನನಗೆ ಹೇಳಲು ಬರುವುದಿಲ್ಲ. ಪೋಲೀಸರಿಗೆ ನಿಪಿ-1 ದೂರನ್ನು ನಾನೇ ಬರೆದುಕೊಟ್ಟಿರುತ್ತೇನೆ. ನಿಪಿ-1 ರಲ್ಲಿರುವ ಬರಹ ನನ್ನದೇ ಆಗಿರುತ್ತದೆ. ಮೋಟಾರು ಸೈಕಲಿಗೆ ಎಲ್ಲೆಲ್ಲಿ ಜಖಂ ಆಗಿದೆ ಎಂದು ನನಗೆ ಹೇಳಲು ಸಾಧ್ಯವಿಲ್ಲ. ಕೆಎಂಸಿ ಆಸ್ಪತ್ರೆಯಲ್ಲಿ ನೀಡಿದ ಹೇಳಿಕೆ ಪ್ರಕಾರ ಪೋಲೀಸು ಕೇಸು ಆದರೆ ಪರಿಹಾರ ಸಿಗುವುದಿಲ್ಲ ಅಂತ ಹೇಳಿ ಅರ್ಜಿದಾರರು ನನ್ನಿಂದ ಸುಳ್ಳು ದೂರನ್ನು ಬರೆಸಿದ್ದಾರೆಂದರೆ ಸರಿ ಅಲ್ಲ. ರಾಧಾಕೃಷ್ಣ ರಮೇಶ ಮತ್ತು ರಾಘವನ್ ಎಲ್ಲರೂ ಉಪ್ಪಿನಕುದ್ರು ಗ್ರಾಮದವರು ಎಂದರೆ ನಿಜ. ಸುಳ್ಳು ಕೇಸನ್ನು ಸೃಷ್ಟಿ ಮಾಡುವ ಉದ್ದೇಶದಿಂದ ನಾನು, ರಾಧಾಕೃಷ್ಣ ರಮೇಶ ಮತ್ತು ರಾಘವನ್ ಒಟ್ಟು ಸೇರಲು ಒಂದು ದಿವಸ ಬೇಕಾದ ಕಾರಣ ಒಂದು ದಿವಸ ತಡವಾಗಿ ಪಿರ್ಯಾದಿ ದಾಖಲು ಮಾಡಿರುತ್ತೇನೆಂದರೆ ಸರಿ ಅಲ್ಲಾ. ಅರ್ಜಿದಾರನು ಆ ಸಂದರ್ಭದಲ್ಲಿ ದೂರವಾಣಿ ಮೂಲಕ ನನ್ನ ಜೊತೆ ಸಂಪರ್ಕದಲ್ಲಿದ್ದರು ಎಂದರೆ ಸರಿ ಅಲ್ಲಾ. ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿ ಅಲ್ಲಾ.

<u>ಮರು ವಿಚಾರಣೆ :</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾ.
ಕುಂದಾಪುರ